ಜೀವಗಳೆಷ್ಟೋ, ಹಣದ ಅವಶ್ಯಕತೆಗಾಗಿ ಮಧ್ಯವರ್ತಿಗಳಿಂದ ವಂಚನೆಗೆ ಒಳಗಾದವರೆಷ್ಟೋ, ಅಂಗವಿಕಲ ಮಗು, ಬುದ್ಧಿಮಾಂದ್ಯ ಮಗು.. ಎಂದೆಲ್ಲ ಬಿಟ್ಟುಹೋದವರೆಷ್ಟೋ!

ಹಣದ ಸಲುವಾಗಿ ಬೇರೆಯವರ ಭ್ರೂಣವನ್ನು ವಿವಿಧ ತಂತ್ರಜ್ಞಾನ (ಐವಿಎಫ್ ಅಥವಾ ಪ್ರನಾಳ ಶಿಶು)ಗಳ ಮೂಲಕ ಗರ್ಭದಲ್ಲಿ ಹೊತ್ತು ಹೆತ್ತುಕೊಡುವ ಈ ಬಾಡಿಗೆ ತಾಯ್ತನವೆಂಬ ಉದ್ಯಮದಲ್ಲಿ ಒಂದು ಅಂದಾಜಿನ ಪ್ರಕಾರ ಸದ್ಯ 2 ಶತಕೋಟಿ ಡಾಲರ್ ವಹಿವಾಟು ನಡೆಯುತ್ತಿದೆ. ಪ್ರತಿ ವರ್ಷ 25,000 ಮಕ್ಕಳು ಈ ರೀತಿ ಬಾಡಿಗೆ ತಾಯಂದಿರ ಮೂಲಕ ಜನಿಸುತ್ತಾರೆ. (ಅಂಕಿ– ಸಂಖ್ಯೆಗಳು 10 ಸಾವಿರ ಎಂದು ಹೇಳುತ್ತವೆ). 2015ರವರೆಗೆ ಬಾಡಿಗೆ ತಾಯಿಯ ಮೂಲಕ ಮಗುವನ್ನು ಪಡೆದವರಲ್ಲಿ ಶೇ.80ರಷ್ಟು ವಿದೇಶೀಯರು. ಕಳೆದ ನವೆಂಬರ್‌ನಲ್ಲಿ ವಿದೇಶೀಯರು ಈ ವ್ಯವಸ್ಥೆಯ ಮೂಲಕ ಭಾರತದಲ್ಲಿ ಮಗು ಪಡೆಯುವುದಕ್ಕೆ ಭಾರತೀಯ ವೈದ್ಯಕೀಯ ಸಂಶೋಧನ ಮಂಡಳಿ ನಿಷೇಧ ಹೇರಿತು.

2014ರಲ್ಲೇ ವಾಣಿಜ್ಯ ಉದ್ದೇಶದ ಬಾಡಿಗೆ ತಾಯ್ತನದ ನಿಷೇಧದ ಕುರಿತು ಪ್ರಸ್ತಾವ ಸಲ್ಲಿಸಲಾಗಿತ್ತು. ಕಾನೂನು ಆಯೋಗದ ವಿಸ್ತೃತ ವರದಿ. ಭಾರತೀಯ ವೈದ್ಯಕೀಯ ಸಂಶೋಧನ ಮಂಡಳಿ ಸಲಹೆ ನೀಡಿದ ನಂತರ ಈ ಮಸೂದೆಯನ್ನು ರೂಪಿಸಲಾಗಿದೆ. ಆದರೆ ಕಳೆದ ವರ್ಷ ಕರಡು ಮಸೂದೆಯನ್ನು ರೂಪಿಸುತ್ತಿರುವಾಗಲೇ ಸೆಲೆಬ್ರಿಟಿಯೊಬ್ಬರು ಈ ವ್ಯವಸ್ಥೆಯಡಿ ಮಗುವನ್ನು ಪಡೆದಿದ್ದು ಇನ್ನಷ್ಟು ಚರ್ಚೆಗೆ ಗ್ರಾಸವಾಯಿತು.





ಬಾಡಿಗೆ ತಾಯಂದಿರ ಜೊತೆ ಗುಜರಾತ್‌ನ ಆನಂದ್‌ನ ಆಕಾಂಕ್ಷಾ ಐವಿಎಫ್ ಕ್ಲಿನಿಕ್‌ನ ಡಾ.ನಯನಾ ಪಟೇಲ್

### ಭಾರತದ ಆಕರ್ಷಣೆ ಏಕೆ?

ಇಲ್ಲಿರುವ 3000ಕ್ಕೂ ಅಧಿಕ ಐವಿಎಫ್ ಕ್ಲಿನಿಕ್‌ಗಳು, ಸುಲಭವಾಗಿ ಸಿಗುವ ಮೆಡಿಕಲ್ ವೀಸಾದ ಜೊತೆಗೆ ಕಡಿಮೆ ವೆಚ್ಚ ವಿದೇಶೀಯರ ಆಕರ್ಷಣೆಗೆ ಕಾರಣ. ಅಮೆರಿಕದಲ್ಲಿ ಈ ಪ್ರಕ್ರಿಯೆಗೆ 110 ಸಾವಿರ ಡಾಲರ್ ಖರ್ಚಾದರೆ, ಭಾರತದಲ್ಲಿ ಇದಕ್ಕಾಗುವ ಖರ್ಚು 40 ಸಾವಿರ ಡಾಲರ್ ಮಾತ್ರ.

## ಸೆಲೆಬ್ರಿಟಿಗಳ ಧಾವಂತ

ಬಾಲಿವುಡ್ ನಟ, ಜನಪ್ರಿಯ ಸಿನಿಮಾ 'ಗೋಲ್‌ಮಾಲ್' ಖ್ಯಾತಿಯ ತುಷಾರ್ ಕಪೂರ್ ಕಳೆದ ಜೂನ್‌ನಲ್ಲಿ ಗಂಡು ಮಗುವಿಗೆ ತಂದೆಯಾದ ಸುದ್ದಿ ಸಿನಿಪ್ರಿಯರು ಮಾತ್ರವಲ್ಲ, ನೈತಿಕತೆಯ ಬಗ್ಗೆ ಕಾಳಜಿಯುಳ್ಳವರೆಲ್ಲ ಹುಬ್ಬೇರಿಸುವಂತೆ ಮಾಡಿತ್ತು. ಹಾಗೆ ನೋಡಿದರೆ ಬಾಲಿವುಡ್‌ನಲ್ಲಿ ಬಾಡಿಗೆ ತಾಯಿಯ ಮೂಲಕ ಮಗು ಪಡೆದವರ ದೊಡ್ಡ ಪಟ್ಟಿಯೇ ಇದೆ. ಇತರ ಸೆಲೆಬ್ರಿಟಿಗಳಾದ ಶಾರುಕ್ ಖಾನ್, ಅಮೀರ್ ಖಾನ್, ಸೋಹೈಲ್ ಖಾನ್.. ಸ್ವಂತ ಮಕ್ಕಳಿದ್ದರೂ ಕೂಡಾ ಬಾಡಿಗೆ ತಾಯಂದಿರ ಮೂಲಕ ಮಕ್ಕಳನ್ನು ಪಡೆದವರೇ.

ಚೀನಾದಲ್ಲಿದ್ದಂತೆ ನಮ್ಮಲ್ಲೇನೂ ಇಷ್ಟೇ ಮಕ್ಕಳನ್ನು ಪಡೆಯಬೇಕೆಂಬ ನಿಯಮಗಳಿಲ್ಲ. ಆದರೂ ಒಂದೋ, ಎರಡೋ ಮಕ್ಕಳನ್ನು ಪಡೆದು, ನಂತರ ಬಾಡಿಗೆ ತಾಯಿಯ ಮೂಲಕ ಮಗುವನ್ನು ಪಡೆದವರು ಈ ಸೆಲೆಬ್ರಿಟಿಗಳು. ಆದರೆ ಅವಿವಾಹಿತ ತುಷಾರ್ ಬಾಡಿಗೆ ತಾಯಿಯ ಮೂಲಕ ತಂದೆ ಪಟ್ಟವನ್ನು ಹೊತ್ತ ಮೊದಲ ಸೆಲೆಬ್ರಿಟಿ ಸಿಂಗಲ್ ಪೇರೆಂಟ್ ಆಗಿದ್ದು, ಬಾಡಿಗೆ ತಾಯ್ತನ ಕುರಿತಂತೆ ನಡೆಯುತ್ತಿದ್ದ ಚರ್ಚೆಯನ್ನು ಇನ್ನಷ್ಟು ತಾರಕಕ್ಕೇರಿಸಲು ಕಾರಣವಾಗಿತ್ತು. ಈ ಬಾಡಿಗೆ ತಾಯ್ತನ ನಿಯಂತ್ರಣಕ್ಕೆ ಕೇಂದ್ರ ಸಂಪುಟ ಒಪ್ಪಿಗೆ ನೀಡಿರುವ ಮಸೂದೆಯಲ್ಲಿ ಸಿಂಗಲ್ ಪೇರೆಂಟ್ ಬಾಡಿಗೆ ತಾಯಿಯ ಮೂಲಕ ಮಗುವನ್ನು ಪಡೆಯಲು ಅರ್ಹರಲ್ಲ ಎಂಬ ಅಂಶವಿದ್ದು, ಈ ಕುರಿತು ಎದ್ದಿರುವ ವಾದ– ವಿವಾದಗಳಿಗೆ ಅಂತ್ಯ ಹಾಡಲು ಹೊರಟಿದೆ.

ಮಸೂದೆಯ ಮೂಲಕ ಮಹಿಳೆಯರ ಹಿತ ಕಾಪಾಡುವ ಉದ್ದೇಶವೇನೋ ಒಳ್ಳೆಯದೇ. ಏಕೆಂದರೆ ಈ ಉದ್ಯಮದಲ್ಲಿ ಎಲ್ಲಾ ರೀತಿಯ ಶೋಷಣೆಗೆ ಒಳಗಾಗುವುದು ಮಹಿಳೆ. ಅದರಲ್ಲೂ ಆರ್ಥಿಕವಾಗಿ ತೊಂದರೆಯಿರುವ ಮಹಿಳೆಯರು ಹಣ ಗಳಿಸಲು, ತಮ್ಮ ಕುಟುಂಬದ ಹಣಕಾಸು ಸಂಕಷ್ಟಗಳನ್ನು ನೀಗಿಸಲು ಇದೊಂದು ಸುಲಭದ ಮಾರ್ಗ ಎಂದು ತಿಳಿದುಕೊಂಡಿದ್ದಾರೆ ಅಥವಾ ಹಾಗಂತ ಇದರಲ್ಲಿ ತೊಡಗಿರುವ ಕ್ಲಿನಿಕ್‌ಗಳು, ಮಧ್ಯವರ್ತಿಗಳು ನಂಬಿಸಿದ್ದಾರೆ ಎನ್ನಬಹುದು.

ಆದರೆ ಅಂಡಾಣು ದಾನವಿರಲಿ ಅಥವಾ ಬಾಡಿಗೆ ಗರ್ಭ ಧರಿಸುವುದಿರಲಿ ಸಮಸ್ಯೆಗಳನ್ನು ಎದುರಿಸುವುದು ಹೆಣ್ಣೇ. ಬಡತನ, ಶಿಕ್ಷಣದ ಕೊರತೆಯಿಂದಾಗಿ ಹಣದ ವಿಷಯದಲ್ಲೂ ಹೆಚ್ಚು ಚೌಕಾಶಿ ಮಾಡಲಾರದ ಅಸಹಾಯಕತೆ. ಸಾಮಾನ್ಯವಾಗಿ ಈ ಇಡೀ ಪ್ರಕ್ರಿಯೆಗೆ ತಗಲುವ ವೆಚ್ಚ 10– 15 ಲಕ್ಷ ರೂಪಾಯಿ. ವಿದೇಶಿ ದಂಪತಿಯಾದರೆ ಇನ್ನೂ ಹೆಚ್ಚಿನ ಮೊತ್ತದ ಹಣಕ್ಕೆ ಬೇಡಿಕೆ ಇಡಲಾಗುವುದು. ಆದರೆ ಬಾಡಿಗೆ ತಾಯಿಗೆ ಸಿಗುವ ಹಣ ಮಾತ್ರ 3– 4 ಲಕ್ಷ ರೂಪಾಯಿವರೆಗೆ. ಹೆಚ್ಚಿನ ಸಂದರ್ಭದಲ್ಲಿ ಮಗು ಪಡೆಯುವ ದಂಪತಿ ಪಾವತಿಸುವ ಹಣದ ಅರ್ಧದಷ್ಟು ಮಾತ್ರ ಬಾಡಿಗೆ ತಾಯಿಯ ಕೈ ಸೇರುತ್ತದೆ. ಉಳಿದ ಹಣವೆಲ್ಲ ಮಧ್ಯವರ್ತಿಗಳ ಪಾಲಿಗೆ.

## ಶೋಷಣೆಯ ಜಾಲ

'ಈ ಬಾಡಿಗೆ ತಾಯ್ತನದಲ್ಲಿ ಹೆಣ್ಣಿನ ಶೋಷಣೆ ಅತ್ಯಧಿಕ.

**ಐವಿಎಫ್ ಕ್ಲಿನಿಕ್‌ಗಳು ಇಡೀ ಪ್ರಕ್ರಿಯೆಗೆ 10– 15 ಲಕ್ಷ ರೂಪಾಯಿ ಪಡೆದರೆ ಬಾಡಿಗೆ ತಾಯಿಗೆ ಸಿಗುವ ಹಣ ಮಾತ್ರ 3– 4 ಲಕ್ಷ ರೂಪಾಯಿ.**